ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಉಡುಪಿ.

ಸಿ.ಸಿಃ 949/2025
ಡಿ-ಡಬ್ಲ್ಯೂ- 01

| | | |
|---|---|---|
| ಸಾಕ್ಷಿದಾರರ ಹೆಸರು | : | ಸುದಾಕರ್ ಸುವರ್ಣ |
| ತಂದೆಯ ಹೆಸರು | : | ರಾಜು ತಿಂಗಳಾಯ |
| ವಯಸ್ಸು | : | 51 |
| ಉದ್ಯೋಗ | : | ಮೀನುಗಾರಿಕೆ |
| ವಾಸಸ್ಥಳ | : | ಕಟಪಾಡಿ |

ದಿನಾಂಕಃ 06-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದ **:**

ಪಿರ್ಯಾದುದಾರರ ಪರಿಚಯ ಇದೆ. ಅದೇ ರೀತಿ ರವಿ ಅಮೀನ್ ಮತ್ತು ಸಂತೋಷ್ ಕುಮಾರ್ ಎನ್ನುವವರ ಪರಿಚಯ ಕೂಡ ಇದೆ. ನಾನು ಮಲ್ಪೆಯಲ್ಲಿ ಕೆಲಸಕ್ಕೆ ಹೋಗುತಿದ್ದುದರಿಂದ ಅವರುಗಳ ಪರಿಚಯವಾಗಿದೆ. ನಾನು ಮತ್ತು ಪಿರ್ಯಾದುದಾರರ ಭಾವ ಸುರೇಶ್ ಪಾಲನ್ ರವರ ನಡುವೆ ಹಣಕಾಸಿನ ವ್ಯವಹಾರ ನಡೆದಿದೆ. ನನಗೆ ಸುರೇಶ್ ಪಾಲನ್ ರವರನ್ನು ರವಿ ಅಮೀನ್ ಮತ್ತು ಸಂತೋಷ್ ಕುಮಾರ್ ರವರು ಪರಿಚಯ ಮಾಡಿ ಕೊಟ್ಟಿರುತ್ತಾರೆ . ಸುರೇಶ್ ಪಾಲನ್ ರವರ ಮನೆ ಕರ್ನಾಟಕ ಬ್ಯಾಕ್ ಗೆ ಅಡಮಾಣ ಮಾಡಿ ಸಾಲ ಪಡೆದಿದ್ದರು ಅದು ಸಾಲ ಕಟ್ಟದೇ ಇದ್ದರಿಂದ ಮಾರಾಟ ಕ್ಕೆ ಬಂದಿತ್ತು ಆ ಬಗ್ಗೆ ಹಣಕಾಸಿನ ಸಹಾಯ ಮಾಡುವಂತೆ ಸುರೇಶ್ ಪಾಲನ್ ರವರು ನನಗೆ ಕೇಳಿಕೊಂಡಿರುತ್ತಾರೆ. ಆಗ ನಾನು 13-01-2023 ರಂದು ರೂ 500000 ಹಣವನ್ನು ಸುರೇಶ್ ಪಾಲನ್ ರವರ ಬ್ಯಾಂಕ್ ಖಾತೆಗೆ ಹಾಕಿರುತ್ತೇನೆ. ನಾನು ಕೊಟ್ಟ ಹಣವನ್ನು ಸುರೇಶ್ ಪಾಲನ್ ರವರು ವಾಪಸ್ಸು ಕೊಟ್ಟಿಲ್ಲ. ರವಿ ಅಮೀನ್ ಮತ್ತು ಆರೋಪಿ ಸಂತೋಷ್ ಕುಮಾರ್ ರವರು ಪಿರ್ಯಾದಿಯ ಜಾಗ ಮಾರಾಟಕ್ಕೆ ಇದೆ ಎಂದು

ಹೇಳಿದರು . ಸ್ವದ್ರಿ ಜಾಗ 7 ಸೆಂಟ್ಸ್ ಜಾಗವಾಗಿದ್ದು ಅದು ಕಡೆಕಾರ್ ನಲ್ಲಿ ಇರುತ್ತದೆ . ನಾನು ಮೊದಲಿಗೆ ಖರೀದಿಗೆ ಒಪ್ಪಿಲಿಲ್ಲ . ಸುರೇಶ್ ಪಾಲನ್ ರವರಿಗೆ ಕೊಟ್ಟಿದ್ದ ಹಣವನ್ನೇ ಅವರು ಕೊಟ್ಟಿರಲಿಲ್ಲ ಆದ್ದರಿಂದ ನಾನು ಒಪ್ಪಿಕೊಂಡಿರಲಿಲ್ಲ. ರವಿ ಅಮೀನ್ ಮತ್ತು ಆರೋಪಿ ಸಂತೋಷ್ ಕುಮಾರ್ ರವರು ತಾವು ಜಾಮೀನುದಾರರಾಗಿ ಇರುವುದಾಗಿ ತಮ್ಮನ್ನು ನಂಬುವಂತೆ ಕೋರಿಕೊಂಡ ಮೇರೆಗೆ ನಾನು ಒಪ್ಪಿಕೊಂಡೆ . ನಾನು ಆಗ ಸಾಕ್ಷಿದಾರ ಬಳಿ ಅಂದರೆ ಆರೋಪಿಗಳಾದ ರವಿ ಅಮೀನ್ ಮತ್ತು ಸಂತೋಷ್ ಕುಮಾರ್ ರವರಿಂದ ಚೆಕ್ ಗಳನ್ನು ಕೊಡುವಂತೆ ಕೇಳಿದೆ . ಈ ಬಗ್ಗೆ ನಾನು ಜಾಗ ಖರೀದಿ ಮಾಡಲು ಒಪ್ಪಿ ಕರಾರು ಮಾಡಿಕೊಂಡೆ ಅದಕ್ಕೆ ಸಾಕ್ಷಿದಾರರಾಗಿ ರವಿ ಅಮೀನ್ ಮತ್ತು ಆರೋಪಿ ಸಂತೋಷ್ ಕುಮಾರ್ ರವರು ಸಹಿ ಮಾಡಿರುತ್ತಾರೆ . ನಾನು 17 ಲಕ್ಷದ 50 ಸಾವಿರ ರೂಗಳಿಗೆ ಖರೀದಿಗೆ ಪಡೆಯಲು ಒಪ್ಪಿಕೊಂಡೆ ಮತ್ತು 10 ಲಕ್ಷ ಗಳನ್ನು ಮುಂಗಡವಾಗಿ ಚೆಕ್ ಮುಖೇನ ಪಿರ್ಯಾದಿ ಸಂತೋಷ್ ಕುಮಾರ್ ಗೆ ಕೊಟ್ಟಿರುತ್ತೇನೆ. ಆದರೇ ಪಿರ್ಯಾದಿ ಸಂತೋಷ್ ಕುಮಾರ್ ನನಗೆ ಜಾಗವನ್ನು ಕ್ರಯ ಮಾಡಿ ಕೊಡಲಿಲ್ಲ . ಜಾಗವನ್ನು conversion ಮಾಡಿಸಬೇಕು ಎಂದು ಹಣ ಕೇಳಿದರು ಆಗ ಪುನಃ ನಾನು ರೂ 3 ಲಕ್ಷ ಗಳನ್ನು ನಗದಿನ ರೂಪದಲ್ಲಿ ಪಿರ್ಯಾದಿ ಸಂತೋಷ್ ಕುಮಾರ್ ಗೆ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ಆಸ್ತಿಯ ದಾಖಲಾತಿಗಳನ್ನು ಪಿರ್ಯಾದಿ ಸಂತೋಷ್ ಕುಮಾರ್ ನನಗೆ ಕೊಟ್ಟು ಸೈಟ್ ನ್ನು ನೊಂದಾವಣಿ ಮಾಡಲು ವಕೀಲರು ಬಳಿ ಕೊಡುವಂತೆ ಹೇಳಿದರು. ಪಿರ್ಯಾದಿ ಸಂತೋಷ್ ಕುಮಾರ್ ನನಗೆ ಮೂಲ ದಾಖಲಾತಿಗಳನ್ನು ಕೊಡುವಾಗ ಅವರು ಸಾಕ್ಷಿದಾರರು ಕೊಟ್ಟಿದ್ದ ಚೆಕ್ ಗಳನ್ನು ಕೊಡುವಂತೆ ನನ್ನನ್ನು ಕೇಳಿದರು ಆಗ ನಾನು ಆ 2 ಚೆಕ್ ಗಳನ್ನು ಪಿರ್ಯಾದಿ ಸಂತೋಷ್ ಕುಮಾರ್ ಗೆ ಕೊಟ್ಟೆ . ನಂತರ ಪಿರ್ಯಾದಿ ಸಂತೋಷ್ ಕುಮಾರ್ ನೊಂದಾವಣೆ ಮಾಡಿಕೊಳ್ಳಲು ಬರಲಿಲ್ಲ . ನಂತರ ನಾನು ನ್ಯಾಯಲಯದಲ್ಲಿ ದಾವೆ ಹಾಕಿರುತ್ತೇನೆ . ಆ ದಾವೆಯ ಸಂಖ್ಯೆ OS No. 14/2025

ಆಗಿದ್ದು ಅದು ಒಂದನೇ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯ, ಉಡುಪಿಯಲ್ಲಿ ಇರುತ್ತದೆ. ಕರಾರಿನ ಮೂಲ ಪ್ರತಿಯನ್ನು ಮೇಲ್ಕಂಡ ದಾವೆಯಲ್ಲಿ ನಾನು ಹಾಜರುಪಡಿಸಿರುತ್ತೇನೆ .

**ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಿಂದ : ಸಮಯವಕಾಶ ಕೋರಿದ್ದು , ನೀಡಲಾಯಿತು**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.